**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:35:EMIS:ಸುತ್ತೋಲೆ:2020-21:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:12-02-2021.

# ಸುತ್ತೋಲೆ

ವಿಷಯ: 2020-21 ನೇ ಸಾಲಿನ ವರ್ಗಾವಣೆ ಸಂಬಂಧ ಕಾಲೇಜಿನ ಬೋಧಕರ ವಿವರಗಳನ್ನು ಇಎಂಐಎಸ್ ತಂತ್ರಾಂಶದಲ್ಲಿ Update ಮಾಡುವ ಬಗ್ಗೆ.

*******

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರ ವರ್ಗಾವಣೆಗೆ ಸಂಬಂಧಿಸಿದಂತೆ, ಹೊಸದಾಗಿ ವರ್ಗಾವಣೆ ನಿಯಮಗಳನ್ನು ರೂಪಿಸಲಾಗಿದ್ದು, ಸದರಿ ನಿಯಮಗಳನ್ವಯ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಬೇಕಿರುತ್ತದೆ. ಈ ಹಿನ್ನೆಲೆಯಲ್ಲಿ ಅಧೀನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 2019-20ನೇ ಸಾಲಿನ ಬೋಧನಾ ಕಾರ್ಯಭಾರ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೋಧಕರ ಸೇವಾ ವಿವರಗಳನ್ನು **ದಿನಾಂಕ:17.02.2021ರೊಳಗಾಗಿ** ಕಡ್ಡಾಯವಾಗಿ Update ಮಾಡುವಂತೆ ಸೂಚಿಸಲಾಗಿದೆ.

- ➢ 2019-20ನೇ ಸಾಲಿಗೆ ಸಂಬಂಧಿಸಿದಂತೆ, ಕಾಲೇಜಿನಲ್ಲಿರುವ ಎಲ್ಲಾ ಕೋರ್ಸಿಗೆ ಸಂಬಂಧಿಸಿದ ವಿಷಯಗಳ ಬೋಧನಾ ಕಾರ್ಯಭಾರವನ್ನು ಕಡ್ಡಾಯವಾಗಿ Update ಮಾಡುವುದು.
- E.M.I.S ತಂತ್ರಾಂಶದಲ್ಲಿ ಕಾಲೇಜಿನ Area Type of College ಅನ್ನು ಕಡ್ಡಾಯವಾಗಿ Update ಮಾಡುವುದು. ಈ ಕುರಿತು ಇಲಾಖಾ ವೆಬ್‌ಸೈಟ್‌ನಲ್ಲಿ Transfer 2020-21 webpage ನಲ್ಲಿ ಲಭ್ಯವಿರುವ userguide ಅನ್ನು ಗಮನಿಸಬಹುದಾಗಿದೆ.
- ➢ ಎಲ್ಲಾ ಬೋಧಕ ಸಿಬ್ಬಂದಿ ವರ್ಗದವರು ಅವರ **service history** ಅನ್ನು ಸ್ವತಃ ಇಲಾಖೆಯ ವೆಬ್‌ಸೈಟ್‌ನಲ್ಲಿನ ವೆಬ್‌ಲಿಂಕ್ ನಲ್ಲಿ **update** ಮಾಡಿ, ಲಭ್ಯವಾಗುವ ಮುದ್ರಿತ ಪ್ರತಿಯನ್ನು (printout) ಸಹಿ ಮಾಡಿ ಪ್ರಾಂಶುಪಾಲರಿಗೆ ಸಲ್ಲಿಸಿರುವುದು.
- ➢ ಪ್ರಾಂಶುಪಾಲರು ಬೋಧಕ ಸಿಬ್ಬಂದಿ ವರ್ಗದವರ **service history** ಅನ್ನು ಪರಿಶೀಲಿಸಿ E.M.I.S ತಂತ್ರಾಂಶದಲ್ಲಿ ಬೋಧಕರ **service history** ಅನ್ನು **Approve** ಮಾಡಬೇಕು.
- ➢ ಇಲಾಖೆಯ website ನಲ್ಲಿ ವರ್ಗಾವಣೆ ಉದ್ದೇಶಕ್ಕಾಗಿ ರೂಪಿಸಿರುವ Transfer 2020-21 webpage ನ್ನು ಆಗ್ಗಿಂದಾಗ್ಗೆ ಗಮನಿಸಿ ಅದರಲ್ಲಿನ ಸೂಚನೆಗಳನ್ನು ಪಾಲಿಸುವುದು.
- ➢ ನಿಯೋಜನೆ ಹೊಂದಿದ ಬೋಧಕ/ಬೋಧಕೇತರರ ಮಾಹಿತಿಯನ್ನು ಲೀನ್ ಹೊಂದಿರುವ ಅಂದರೆ ವೇತನ ಪಡೆಯುತ್ತಿರುವ ಕಾಲೇಜಿನ ಇ.ಎಂ.ಐ.ಎಸ್ ನಲ್ಲಿ ಮಾತ್ರ ನಮೂದು **(Entry)** ಮಾಡತಕ್ಕದ್ದು.
- ➢ ಬೋಧಕರು ತಾವು ನೇಮಕಾತಿ ಹೊಂದಿದ ವಿಷಯವನ್ನು ಮಾತ್ರ ನಮೂದಿಸುವುದು
- ➢ ಅನ್ಯ ಕಾರ್ಯ ನಿಮಿತ್ತ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ ಮಾಹಿತಿಯನ್ನು ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಕಾಲೇಜಿನ ಇ.ಎಂ.ಐ.ಎಸ್.ನಲ್ಲಿ ಮಾತ್ರ ನಮೂದು ಮಾಡುವುದು.

➢ ಪ್ರಾಂಶುಪಾಲರು ಗ್ರೇಡ್-1/ಗ್ರೇಡ್-2 ಹುದ್ದೆಗೆ ಪದೋನ್ನತಿ ಹೊಂದಿರುವ ಪ್ರಾಧ್ಯಾಪಕರು ಮಾತ್ರ ಇ.ಎಂ.ಐ.ಎಸ್.ನಲ್ಲಿ **Principal Permanent** ಎಂದು ನಮೂದಿಸತಕ್ಕದ್ದು. ಉಳಿದಂತೆ ಸೇವಾ ಹಿರಿತನದ ಆಧಾರದ ಮೇಲೆ/ ಅನ್ಯಕಾರ್ಯನಿಮಿತ್ತ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು **Principal incharge** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

➢ ಅನುದಾನಿತ ಖಾಸಗಿ ಕಾಲೇಜಿನಿಂದ ಮರುಹಂಚಿಕೆ ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳ ವಿವರಗಳನ್ನು ಇ.ಎಂ.ಐ.ಎಸ್.ನಲ್ಲಿ **Re-deployed from Private Aided College** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

Service History ಅಪ್‌ಲೋಡ್ ಮಾಡಿರುವ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಅಸಂಗತ ಮಾಹಿತಿಗಳನ್ನು ಇ.ಎಂ.ಐ.ಎಸ್.ನಲ್ಲಿ **Upload** ಮಾಡಿದಲ್ಲಿ ಸಂಬಂಧಿಸಿದ ಬೋಧಕರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

12/2/21

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.